ಶ್ರೀ ಎಸ್.ಆರ್. ಬೊಮ್ಮಾಯಿ,—ನಾವಮ್ಸ್ ಫಿಕ್ಸ್ ಮಾಡಿದ್ದೇವೆ. ಆದರೆ ಅದರ ವಿವರ ಈಗ ನನ್ನ ಬಳಿ ಇಲ್ಲ. ಮಂಡಲ್ ಪಂಚಾಯತ್‌ಗಳು ರಚನೆ ಆದ ಮೇಲೆ ಇವರ ಕೆಲಸ ಕಡಿಮೆ ಆಗಿದ್ದರಿಂದ ಈಗ ಇವರ ವರ್ಕ್‌ಲೋಡ್‌ನ್ನು ಜಾಸ್ತಿ ಮಾಡಿದ್ದೇವೆ. ಒಂದುವೇಳೆ ಇದರಿಂದ ಅವರಿಗೆ ಕೆಲಸ ಮಾಡುವುದು ಕಷ್ಟವಾದರೆ ಅದನ್ನು ನಾವು ನೋಡುತ್ತೇವೆ.

ಶ್ರೀ ಯು. ಭೂಪತಿ.—ಏರಿಯಾ ಎಷ್ಟು ಜಾಸ್ತಿ ಮಾಡಿದ್ದೀರಿ, ಎಷ್ಟು ಕಿಲೋಮೀಟರ್ ವ್ಯಾಪ್ತಿಯಲ್ಲಿ ಇವರು ಕೆಲಸ ಮಾಡಬೇಕಾಗಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಕೆಲವು ನಾರ್ಮ್ಸ್ ಮಾಡಿದ್ದೇವೆ. ಹಳ್ಳಿಗಳು, ಜನಸಂಖ್ಯೆ ಭೂಮಿ, ಇವುಗಳ ಆಧಾರದ ಮೇಲೆ ಮಾಡಿದ್ದೇವೆ.

ಶ್ರೀ ಪೆಟ್.ಕೆ. ಕುಮಾರಸ್ವಾಮಿ.—ಕಂದಾಯ ಇಲಾಖೆಯಲ್ಲಿ ಗ್ರಾಮಲೆಕ್ಕಿಗರ ಸಂದರ್ಶನವಾಗಿದೆ ಹಾಸನ ಜಿಲ್ಲೆಯಲ್ಲಿ ೮೦ ಗ್ರಾಮಲೆಕ್ಕಿಗರ ಹುದ್ದೆಗಳಿವೆ. ೪ ವರ್ಷಗಳಾಯಿತು, ಗ್ರಾಮಲೆಕ್ಕಿಗರ ಸಂದರ್ಶನ ಮಾಡಿಲ್ಲ. ಬೇಲೂರು ತಾಲ್ಲೂಕಿನಲ್ಲಿ ೧೮ ಗ್ರಾಮಲೆಕ್ಕಿಗಳ ಹುದ್ದೆಗಳಿವೆ. ಇದಕ್ಕೆ ಯಾವಾಗ ಸಂದರ್ಶನ ಮಾಡುತ್ತೀರಿ, ಯಾವಾಗ ಈ ಹುದ್ದೆಗಳಿಗೆ ನೇಮಕ ಮಾಡುತ್ತೀರಿ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಈಗ ಅವಶ್ಯಕತೆ ಇಲ್ಲ, ಅವಶ್ಯಕತೆ ಬಿದ್ದಾಗ ಆಲೋಚನೆ ಮಾಡುತ್ತೇವೆ.

ಶ್ರೀ ಪೆಟ್. ಕೆ. ಕುಮಾರಸ್ವಾಮಿ.—ಅಲ್ಲಿ ಹುದ್ದೆಗಳಿವೆ, ಸಂದರ್ಶನ ಕರೆದು ಕೊಟ್ಟರೆ ನಿರುದ್ಯೋಗಿಗಳಿಗೆ ಅನುಕೂಲವಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ —ಈಗ ಅವಶ್ಯಕತೆ ಇಲ್ಲ. ಆ ಭಾಗದಲ್ಲಿ ಖಾಲಿ ಹುದ್ದೆಗಳು ಹೆಚ್ಚು ಇದೆ ರೆಕ್ರೂಟ್‌ಮೆಂಟ್ ಮಾಡತಕ್ಕಂಥ ಪ್ರಶ್ನೆ ಇಲ್ಲ.

ಮಹಿಳೆಯರ ಉದ್ಯೋಗ ಯೋಜನೆಗಳು

೦೬೪೯. ಶ್ರೀ ಜಿ.ಚಂದ್ರಕಾಂತ ಬೆಲ್ಲದ್ (ಧಾರವಾಡ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಂದರೇ ?

ಅ) ರಾಜ್ಯದಲ್ಲಿ ಮಹಿಳೆಯರ ಕಲ್ಯಾಣದ ಉದ್ಯೋಗ ಯೋಜನೆಗಳ ಸಂಖ್ಯೆ ಎಷ್ಟು ? ಕೇಂದ್ರ ಸರ್ಕಾರದ ಮಹಿಳಾ ಉದ್ಯೋಗದ ಯೋಜನೆಗಳಾವುವು ? (ಪೂರ್ಣ ವಿವರ ಕೊಡುವುದು)

ಆ) ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಉದ್ಯೋಗದಲ್ಲಿ ತೊಡಗಿಸಲು ರಾಜ್ಯ ಸರ್ಕಾರದ ವತ್ತು ಕೇಂದ್ರ ಸರ್ಕಾರದ ಸಧ್ಯದ ಯೋಜನೆಗಳು ಯಾವುವು ? (ವಿವರ ಒದಗಿಸುವುದು).

ಇ) ಗ್ರಾಮೋದ್ಯೋಗ ಗುಡಿ ಕೈಗಾರಿಕೆಗಳು ಮಹಿಳೆಯರಿಗೆ ಉದ್ಯೋಗ ನೀಡಿರುವ ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಪೂರ್ಣ ವಿವರ ನೀಡುವುದು.

ಈ) ಸರ್ಕಾರವು ಮಹಿಳೆಯರ ಕಾರ್ಯಶಕ್ತಿಯನ್ನು ಬಳಸಿಕೊಂಡು ಗೃಹಬಳಕೆಯ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಿ ಉದ್ಯೋಗ ಒದಗಿಸುವ ಯೋಜನೆಗಳನ್ನೇನಾದರೂ ರೂಪಿಸಿದ್ದೀರಾ ? ಹಾಗಿದ್ದಲ್ಲಿ ಅದರ ವಿವರ ನೀಡುವುದು.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಅಂತಹ ನೇರವಾದ ಯೋಜನೆಗಳು ಯಾವುದೂ ಇರುವುದಿಲ್ಲ.

ಆ) ಅನುಬಂದ 'ಅ'ನಲ್ಲಿ ಕೊಡಲಾಗಿದೆ.

ಇ) ನಮ್ಮಲ್ಲಿ ಆ ರೀತಿ ಯೋಜನೆ ಇರುವುದಿಲ್ಲ.

ಈ) ಈಗಾಗಲೇ ಮೇಲೆ (ಅ)ನಲ್ಲಿ ತಿಳಿಸಿರುವಂತೆ ಗೃಹ ಕಲ್ಯಾಣ ಯೋಜನೆಯಲ್ಲಿ ಬ್ಯಾಂಕ್ ಮೂಲಕ ಸಾಲ ಹಾಗೂ ಶೇಕಡ ೨೫ ಸಬ್ಸಿಡಿಯನ್ನು ನೀಡಿ ಅವರು ಗೃಹಬಳಕೆಯ ವಸ್ತುಗಳ ಉತ್ಪಾದನೆ ಮಾಡುವುದರ ಮೂಲಕ ಸ್ವಯಂ ಉದ್ಯೋಗ ಕಲ್ಪಿಸಿದಂತಾಗುತ್ತದೆ.

ಅನುಬಂಧ–'ಆ'

ಮಹಿಳೆಯರನ್ನು ಸ್ವಂತ ಉದ್ಯೋಗದಲ್ಲಿ ತೊಡಗಿಸಲು ತರಬೇತಿ ಯೋಜನೆಗಳು ಹಾಗೂ ಸಹಾಯಧನ ಯೋಜನೆ ಇರುವುದು ಯೋಜನೆಗಳ ವಿವರ ಈ ಕೆಳಕಂಡಂತಿದೆ.

೧) ಸ್ವೈಪ್ ಪ್ರೋಗ್ರಾಂ.—ಈ ಯೋಜನೆಯು ಮಹಿಳೆಯರನ್ನು ಸುಧಾರಿಸುವ ದೃಷ್ಟಿಯಿಂದ ವ್ಯವಸಾಯ, ಪಶುಪಾಲನೆ, ಹೈನುಗಾರಿಕೆ, ವಿಮಾನುಗಾರಿಕೆ, ಕೈಮಗ್ಗ. ಕರಕುಶಲ ಕೈಗಾರಿಕೆ, ವಿಮಾನುಗಾರಿಕೆ ಖಾದಿ ಮತ್ತು ಗುಡಿಕೈಗಾರಿಕೆ ಮತ್ತು ರೇಷ್ಮೆ ಹೀಗೆ ಹಲವಾರು ವಿಭಾಗದಲ್ಲಿ ಮಹಿಳೆಯರ ಸ್ಥಿತಿಯನ್ನು ಮತ್ತು ಉದ್ಯೋಗಾವಕಾಶವನ್ನು ಪ್ರೋತ್ಸಾಹಿಸಲು ಇದನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ.

ಕಾರ್ಪೊರೇಷನ್‌ಗಳು. ಮಂಡಳಿಗಳು, ಫೆಡರೇಷನ್‌ಗಳು,ಯೂನಿಯನ್‌ಗಳು, ವಿಶ್ವವಿದ್ಯಾನಿಲಯಗಳು, ಸಮಾಜ ಕಲ್ಯಾಣ ಸಲಹಾ ಮಂಡಳಿಗಳು (ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡು) ಇತರೆ ಅರೆ ಸರ್ಕಾರಿ ಸಂಸ್ಥೆಗಳು (೦) ಈ ಯೋಜನೆಯನ್ನು ಜಾರಿಗೊಳಿಸಬಹುದಾಗಿದ್ದು, ಈ ಯೋಜನೆ ಪ್ರಾರಂಭಿಸಲು ಕೇಂದ್ರ ಸರ್ಕಾರವು ಶೇಕಡ ೯೦ ಭಾಗ ಸಹಾಯ ಮಾಡುತ್ತದೆ. ಉಳಿದ ಶೇಕಡಾ ೧೦ ಭಾಗವನ್ನು ಜಾರಿಗೊಳಿಸುವ ಸಂಸ್ಥೆ ಭರಿಸಬೇಕಾಗುತ್ತದೆ.

೨) ಮಹಿಳಾ ತರಬೇತಿ ಕೇಂದ್ರಗಳು.—ನಿರ್ಗತಿಕ ಮಹಿಳೆಯರು ತಮ್ಮ ಕಾಲ ಮೇಲೆ ತಾವೇ ನಿಂತುಕೊಳ್ಳುವಂತಾಗಲು ಹಾಗೂ ಅವರಿಂ ಯಾವುದಾದರೂ ಸ್ವಂತ ಉದ್ಯೋಗ ಮಾಡಿ ಜೀವನ ನಡೆಸಲು ದಾರಿ ಮಾಡಿಕೊಡಲು ಕೇಂದ್ರ ಸರ್ಕಾರವು ಮಹಿಳಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಮುಂದೆ ಬರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯಧನ ಮಂಜೂರು ಮಾಡುತ್ತದೆ. ಈ ಯೋಜನೆಯಲ್ಲಿ ಕೇಂದ್ರಸರ್ಕಾರ ಶೇಕಡ ೪೫ ರಾಜ್ಯ ಸರ್ಕಾರಕ್ಕೆ ೪೫ ಶೇಕಡ ಹಾಗೂ ಸ್ವಯಂ ಸೇವಾ ಸಂಸ್ಥೆ ಶೇಕಡ ೧೦ರಷ್ಟು ಅನುಪೋದಿಸಿದ ಯೋಜನೆಯ ಖರ್ಚು ಭರಿಸಬೇಕಾಗುತ್ತದೆ.

ಈ ಯೋಜನೆಯಲ್ಲಿ ಮಹಿಳೆಯರಿಗೆ ೫ ತಿಂಗಳ ಅವಧಿಯ ತರಬೇತಿ ನೀಡುವ ಸೌಲಭ್ಯ ಕಲ್ಪಿಸಿ ಕೊಡುವುದು, ತರಬೇತಿಗೆ ಬೇಕಾದ ಸಲಕರಣೆಗಳು ಸಂಬಳ ಕಚ್ಚಾ ಪದಾರ್ಥಗಳು, ಬಾಡಿಗೆ ಇತರ ವೆಚ್ಚಗಳಿಗೆ ಸಹಾಯಧನ ನೀಡಲಾಗುವುದು. ತರಬೇತಿದಾರರಿಗೆ ತಿಂಗಳಿಗೆ ೭೫ ರೂ. ಸ್ಟೈಫಂಡ್ ಹಾಗೂ ೬ ತಿಂಗಳ ತರಬೇತಿಯಾದ ನಂತರ ೫೦೦–೦೦ ರೂ. ಪುನರ್ವಸತಿ ಸಹಾಯಧನ ಸಹ ನೀಡಲಾಗುವುದು. ಒಂದು ವರ್ಷಕ್ಕೆ ೨ ತಂಡಗಳಿಗೆ ಸಂಮಾರು ೧.೫೦ ಲಕ್ಷ ಸಹಾಯಧನ (ಅನಾವರ್ತ ಸಹಾಯಧನ ಸೇರಿ) ಕೊಡಲಾಗುವುದು.

೩) ಗೃಹ ಕಲ್ಯಾಣ ಯೋಜನೆ.—ಮಹಿಳೆಯರಿಗಾಗಿ ಆದಾಯ ಉತ್ಪನ್ನಕರ ಚಟುವಟಿಕೆಗಳು.—ಈ ಯೋಜನೆಯಡಿಯಲ್ಲಿ ತಮ್ಮ ಅಲ್ಪಗಳಿಸುವುದರೊಂದಿಗೆ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ರಾಜ್ಯ ಸರ್ಕಾರವು ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ತಲಾ ೫೦೦–೦೦ ಮೊತ್ತ ದೊಳಗೆ ಸಾಧ್ಯವಾಗುವಂತೆ ಸಿದ್ಧ ಮತ್ತು ಗೃಹ ಕೈಗಾರಿಕೆಗಳು, ಗ್ರಾಮ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು ಇತ್ಯಾದಿಗಳನ್ನು ಪ್ರಾರಂಭಿಸಲು ರಾಷ್ಟ್ರೀಕರಿಸಲ್ಪಟ್ಟ ಬ್ಯಾಂಕುಗಳಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕ ಕೊಡಿಸುತ್ತಿದ್ದು ಹಾಗೆಯೇ ಸಾಲದ ಶೇಕಡ ೨೫ ಭಾಗ ಮೊತ್ತವನ್ನು ಸಹಾಯ ಧನವನ್ನು ಮಂಡಳಿ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕ ಕೊಡುತ್ತಿದೆ.

೪) ತರಬೇತಿ ಮತ್ತು ಉತ್ಪಾದನಾ ಕೇಂದ್ರಗಳು.—ಇದು ರಾಜ್ಯ ಸರ್ಕಾರದ ಯೋಜನೆ, ಈ ಯೋಜನೆಯಲ್ಲಿ ಬಡ ಮಹಿಳೆಯರಿಗೆ ತರಬೇತಿ ಕೊಟ್ಟು ಉತ್ಪಾದನೆ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸುವ ಸ್ವಯಂ ಸೇವಾ ಸಂಸ್ಥೆಗಳು ಅರೆ ಸರ್ಕಾರಿ ಸಂಸ್ಥೆಗಳು ಹಾಗೂ ಸ್ವಂತವಾಗಿ ಈ ಕೇಂದ್ರಗಳನ್ನು ಪ್ರಾರಂಭ ಮಾಡಲು ಉದ್ದೇಶಿಸುವ ಮಹಿಳೆಯರಿಗೆ ಒಮ್ಮೆ ಗರಿಷ್ಟ ಒಂದು ಲಕ್ಷ ರೂ. ಧನ ಸಹಾಯ ಮಾಡಲಾಗುವುದು, ಆರ್ಹವಾಕ್ಕ ಸಂಸ್ಥೆಗಳು ಕೊಟ್ಟ ಪ್ರಾಜೆಕ್ಟ್ ರಿಪೋರ್ಟ್‌ಅನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಿದ್ದು ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಧನ ಸಹಾಯವನ್ನು ಸರ್ಕಾರ ಮಂಜೂರು ಮಾಡುವುದು.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್,—ಮಾನ್ಯ ಅಧ್ಯಕ್ಷರೆ, ಈಗ ದೇಶದಲ್ಲಿ ಮಹಿಳೆಯರಸಂಖ್ಯೆ ಪ್ರತಿಶತ ೫೦ರ ಪ್ರಮಾಣದಲ್ಲಿದೆ. ಇವೊತ್ತಿನ ದಿವಸ ಅನೇಕ ಮಹಿಳೆಯರು ಸುಶಿಕ್ಷಿತರು ಅಶಿಕ್ಷಿತರು ಪಟ್ಟಣ ಪ್ರದೇಶ ಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗಿಗಳಾಗಿದ್ದಾರೆ. ಇವರಿಗೆ ಏನಾದರೂ ಉದ್ಯೋಗ ಗಳನ್ನು ಕಲ್ಪಿಸಿಕೊಟ್ಟು ಸಹಾಯ ಮಾಡುವಂಥ ಯೋಜನೆಗಳನ್ನು ರಾಜ್ಯಸರ್ಕಾರ ಮಾಡಿದೆಯೇ ಎಂದು ಕೇಳಿದ್ದೇನೆ, ಅದಕ್ಕೆ ರಾಜ್ಯ ಸರ್ಕಾರ ಏನೂ ಮಾಡಿಲ್ಲ ಎಂದೂ ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಇಂತಹ ಯೋಜನೆಗಳನ್ನು ರಾಜ್ಯಸರ್ಕಾರ ಮಾಡಬೇಕು ಎಂದು ನಾನು ವಿನಂತಿಸಿಕೊಳ್ಳುತ್ತಾ ಇದ್ದೇನೆ. ಇದರ ಜೊತೆಗೆ ಸ್ವಯಂಸೇವಾ ಸಂಸ್ಥೆಗಳು, ಕೇಂದ್ರಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಸಹಾಯಧನ ಪಡೆದು ಕಾರ್ಯ ಮಾಡುತ್ತಾ ಇವೆ ಎಂದೂ ಹೇಳುತ್ತಿದ್ದೀರಿ. ಸ್ವಯಂಸೇವಾ ಸಂಸ್ಥೆಗಳು ಅಥವಾ ಖಾಸಗೀ ಸಂಸ್ಥೆಗಳು ಇಂತಹ ಮಹಿಳೆಯರ ಕಲ್ಯಾಣಕ್ಕಾಗಿ ಬೇರೆ ಬೇರೆ ತರಬೇತಿ ಕಾರ್ಯಕ್ರಮಗಳನ್ನು ಮತ್ತು ಉದ್ಯೋಗ ಒದಗಿಸುವಂಥ ಕಾರ್ಯಕ್ರಮಗಳನ್ನು ಮಾಡುತ್ತಿವೆ ಎಂದು ಹೇಳಿದ್ದೀರಿ ಅಂತಹ ಸಂಸ್ಥೆಗಳ ಹೆಸರುಗಳನ್ನು ಕೊಡಬೇಕು ಎಂದು ನಾನು ಕೇಳಿ ಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.— ಈಗ ಮಾನ್ಯ ಬೆಲ್ಲದ್‌ರವರು ಹೇಳಿದ ಹಾಗೆ ಈಗ ನಮ್ಮ ರಾಜ್ಯದಲ್ಲಿ ೫೦ ಪರ್ಸೆಂಟ್ ಮಹಿಳೆಯರು ಇದ್ದಾರೆ, ಅವರಿಗೆ ಉದ್ಯೋಗವನ್ನು ಒದಗಿಸಿ ಸ್ವಾವಲಂಭಿಗಳನ್ನಾಗಿ ಮಾಡುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇದಕ್ಕಾಗಿಯೇ ಕೆಲಸ ಮಾಡುತ್ತಿದೆ. ಮಹಿಳೆಯರ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡಿದ್ದೇವೆ, ಈಗ ಅದು ಅಸ್ತಿತ್ವಕ್ಕೆ ಬಂದಿದೆ. ಅದು ಅಸ್ತಿತ್ವಕ್ಕೆ ಬಂದ ಮೇಲೆ ವಿವಿಧ ಕೈಗಾರಿಕೆಗಳಲ್ಲಿ, ಗುಡಿ ಕೈಗಾರಿಕೆಗಳಲ್ಲಿ ಮಹಿಳೆಯರನ್ನು ಪಾಲ್ಗೊಳ್ಳುವಂತೆ ಮಾಡಲು ಧನಸಹಾಯ ಮಾಡುವುದು, ಸಾಲ ಗಳನ್ನು ಕೊಡುವುದು ಸಬ್ಸಿಡಿ ಕೊಡುವುದು ಇತ್ಯಾದಿ ಕಾರ್ಯಕ್ರಮಗಳನ್ನು ಮಾಡುತ್ತಿದೆ. ಮಹಿಳಾ ಅಭಿವೃದ್ಧಿ ನಿಗಮ ಈ ಸಾಲದ ಗ್ಯಾರಂಟಿ ತೆಗೆದುಕೊಳ್ಳುತ್ತದೆ, ಇತ್ಯಾದಿ ಕಾರ್ಯಕ್ರಮಗಳನ್ನು ಮಾಡ ತಕ್ಕಂಥ ಸದುದ್ದೇಶದಿಂದ ಉಮೆನ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನನ್ನು ಸ್ಥಾಪನೆ ಮಾಡಲಾಗಿದೆ. ಸ್ವಯಂ ಸೇವಾ ಸಂಸ್ಥೆಗಳಲ್ಲೂ ಅನೇಕ ಕಾರ್ಯಕ್ರಮಗಳಿವೆ. ರಾಜ್ಯ ಸರ್ಕಾರವೂ ಕೇಂದ್ರ ಸರ್ಕಾರ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಮಾಡುತ್ತಿದೆ. ಈಗಾಗಲೇ ಸ್ಟೆಪ್ ಪ್ರೋಗ್ರಾಂ ಎಂದು ಇದೆ. ಇದರಲ್ಲಿ ಮಹಿಳೆಯರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ವ್ಯವಸಾಯ, ಪಶುಪಾಲನೆ ಹೈನುಗಾರಿಕೆ ಮೀನುಗಾರಿಕೆ, ಕೈಮಗ್ಗ, ಕರಕುಶಲ ಕೈಗಾರಿಕೆ ಮುಂತಾದ ಕಾರ್ಯಕ್ರಮಗಳನ್ನು ಮಾಡಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಇವೆರಡೂ ಸಹಾಯಮಾಡಿ ಮಹಿಳೆಯರಿಗೆ ಅನುಕೂಲ ಮಾಡುತ್ತಿದೆ. ಮಹಿಳೆಯರ ತರಬೇತಿ ಕೇಂದ್ರಗಳು ೨೬ ಇವೆ. ಇದಕ್ಕೆ ೪೫ ಪರ್ಸೆಂಟ್ ರಾಜ್ಯ ಸರ್ಕಾರ ೪೫ ಪರ್ಸೆಂಟ್ ಕೇಂದ್ರ ಸರ್ಕಾರ, ೧೦ ಪರ್ಸೆಂಟ್ ವಾಲೆಂಟರಿ ಆರ್ಗನೈಸೇಷನ್ಸ್ ಹಾಕಿಕೊಳ್ಳುತ್ತವೆ. ಮಹಿಳಾ ಕಲ್ಯಾಣ ಕಾರ್ಯಕ್ರಮದಲ್ಲಿ ತರಬೇತಿ ಮತ್ತು ಉತ್ಪಾದನಾ ಕಾರ್ಯ ಕ್ರಮಗಳೂ ಇವೆ ವಾಲೆಂಟರಿ ಆರ್ಗನೈಸೇಷನ್ಸ್ ಮುಖಾಂತರ ಸಹಾಯ ಮಾಡುತ್ತಾ ಇದೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.— ಈ ಸ್ವಯಂ ಸೇವಾ ಸಂಸ್ಥೆಗಳು ಎಷ್ಟು ಈ ಕಾರ್ಯ ಕ್ರಮವನ್ನು ಮಾಡುತ್ತಿವೆ ಎನ್ನುವುದರ ಬಗ್ಗೆ ವಿವರಣೆಯನ್ನು ಕೊಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.— ಆ ಇನ್‌ಫರ್ಮೇಷನ್ ನನ್ನ ಹತ್ತಿರ ಇಲ್ಲ, ಸುಮಾರು ೧೨೦-೧೩೦ ವಾಲೆಂಟರಿ ಆರ್ಗನೈಸೇಷನ್ಸ್ ಇವೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.— ಈ ವಿವರ ಕೊಡಿ.

ಶ್ರೀ ಜಿ. ಬಸವಣ್ಣಪ್ಪ — ಕಳಿಸಿಕೊಡುತ್ತೇನೆ.

ಶ್ರೀಮತಿ ಪುಟ್ಟೋರಮ್ಮ ಮದ್ದೂರಾಜ್.— ರಾಜ್ಯದ ಮಹಿಳೆಯರ ಆರ್ಥಿಕ ಅಭಿವೃದ್ಧಿಗೋಸ್ಕರ ಕೇಂದ್ರ ಸರ್ಕಾರದವರು, ಎಷ್ಟು ಅನುದಾನವನ್ನು ಕೊಟ್ಟಿದ್ದಾರೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.— ಅದಕ್ಕೆ ಪ್ರತ್ಯೇಕವಾಗಿ ನೋಟೀಸ್ ಕೊಡಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ — ರಾಜ್ಯದಲ್ಲಿರುವಂತಹ ಹೆಣ್ಣು ಮಕ್ಕಳ ಉದ್ಧಾರಕ್ಕೆ ಅನೇಕ ಕಾರ್ಯ ಕ್ರಮಗಳನ್ನು ಹಾಕಿಕೊಂಡಿದ್ದೇವೆಂದು ಹೇಳಿದಿರಿ. ದನ ಸಾಕುವುದು ಹಾಲು ಉತ್ಪಾದನೆ ಮಾಡುವುದು

೧೯೬೭-೬೮ನೇ ಸಾಲಿನಲ್ಲಿ ಈ ಕಾರ್ಯಕ್ರಮದ ವ್ಯಾಪ್ತಿಯಲ್ಲಿ ಅನುಕೂಲ ಪಡೆದುಕೊಂಡಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ಹೇಳುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.— ಆ ಸಂಖ್ಯೆ ಈಗ ನನ್ನ ಹತ್ತಿರ ಇಲ್ಲ.

ವಿದ್ಯಾರ್ಥಿನಿಲಯಗಳಿಗೆ ಧನಸಹಾಯ ಕುರಿತು

೧೨೪೧. ಶ್ರೀ ಬಾಬುರೆಡ್ಡಿ ವಿ. ತುಂಗಳ್, (ಬೀಳಗಿ) — ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇದುವರೆವಿಗೂ ೧೯೬೭ ಮತ್ತು ೧೯೬೮ ನೇ ಸಾಲಿನಲ್ಲಿ ಯಾವುದೇ ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಧನಸಹಾಯ ಮಾಡಬಾರದೆಂದು ಇಲಾಖೆಯ ನಿರ್ದೇಶಕರು ಜಿಲ್ಲಾಪರಿಷತ್ತುಗಳಿಗೆ ನಿರ್ದೇಶನ ನೀಡಿದ್ದು ನಿಜವೇ?

ಆ) ಹಾಗಿದ್ದಲ್ಲಿ, ಇದು ಗ್ರಾಮಾಂತರ ಶಿಕ್ಷಣ ಸಂಸ್ಥೆಗಳಿಗೆ ಭಾದಕವಾಗುವುದಿಲ್ಲವೇ?

ಇ) ಈ ಆಜ್ಞೆಯನ್ನು ಹಿಂತೆಗೆದುಕೊಳ್ಳುವ ಬಗ್ಗೆ ಸರ್ಕಾರವು ಮರು ಆಲೋಚನೆ ಮಾಡುವುದೇ?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಾಬುರೆಡ್ಡಿ ವಿ, ತುಂಗಳ್,—ಮಾನ್ಯ ಮಂತ್ರಿಯಂವರು ನನ್ನ ಪ್ರಶ್ನೆಗೆ ಇಲ್ಲ, ಉದ್ಭವಿಸುವುದಿಲ್ಲ, ಉದ್ಭವಿಸುವುದಿಲ್ಲ ಎನ್ನುವ ನಕಾರಾತ್ಮಕ ಸರಮಾಲೆಗಳನ್ನು ಇಟ್ಟಿದ್ದಾರೆ. ಅವರೇ ಹೇಳಿದಂತೆ ಒಂದು ಮಾತನ್ನು ನಾನು ಜ್ಞಾಪಕಕ್ಕೆ ತರುತ್ತೇನೆ. ನನ್ನ ಕ್ಷೇತ್ರದಲ್ಲಿರುವ ಚಿಕ್ಕಪಡಸಲಿಗೆ ಗ್ರಾಮದಲ್ಲಿ ಗದಂಗಿನ ತೊಂಟದಾರ್ಯ ಸ್ವಾಮಿಗಳು ಹರಳಯ್ಯನವರ ಹೆಸರಿನಲ್ಲಿ ಒಂದು ಮಾಧ್ಯಮಿಕ ಶಾಲೆಯನ್ನು ಪ್ರಾರಂಭ ಮಾಡಿದ್ದಾರೆ, ಅದಕ್ಕೆ ಒಳ್ಳೆಯ ಕಟ್ಟಡವನ್ನು ಕೂಡ ಕಟ್ಟಿದ್ದಾರೆ. ಸಿಬ್ಬಂದಿಯ ವ್ಯವಸ್ಥೆಯನ್ನು ಮಾಡಿದ್ದಾರೆ. ಕಳೆದ ವರ್ಷ ಇದಕ್ಕೆ ಸಂಬಂಧಪಟ್ಟಂತೆ ಆ ಊರಿನಲ್ಲಿ ಒಂದು ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಿದ್ದು ಅದು ಚೆನ್ನಾಗಿ ನಡೆದುಕೊಂಡು ಬರುತ್ತಿದೆ. ಈ ವರ್ಷ ಗ್ರಾಂಟ್ ಗೋಸ್ಕರ ಸರ್ಕಾರಕ್ಕೆ ಮನವಿ ಪತ್ರವನ್ನು ಕೂಡ ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ಮಾನ್ಯ ಮಂತ್ರಿಗಳನ್ನು ಖುದ್ದು ನೋಡಿದಂಥ ಸಂದರ್ಭದಲ್ಲಿ ಮಂತ್ರಿಗಳು ಕೂಡ, ಗ್ರಾಂಟ್ ಕೊಡಬೇಕೆಂದು ಬರೆದರು. ಆದರೆ, ಜಿಲ್ಲಾ ಕಛೇರಿಗೆ ಹೋಗಿ ವಿಚಾರ ಮಾಡಲಾಗಿ, ಇಲಾಖೆಯ ನಿರ್ದೇಶಕರು ಈ ವರ್ಷ ಮುಂದಿನ ವರ್ಷ ಉಚಿತ ಪ್ರಸಾದ ನಿಲಯಗಳಿಗೆ ಧನ ಸಹಾಯ ಕೊಡಬಾರದೆಂದು ಆದೇಶ ಕೊಟ್ಟಿದ್ದಾರೆಂದು ತಿಳಿಸಿದರು. ನಾನು ಆದೇಶದ ಕಾಪಿಯನ್ನು ಕೇಳಿದೆ. ಅದನ್ನು ಕೂಡ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಇಲ್ಲಿ 'ಉದ್ಭವಿಸುವುದಿಲ್ಲವೆಂದು' ಉತ್ತರ ಕೊಡುತ್ತಾರೆ. ಸರ್ಕಾರದ ನೀತಿ ಈ ರೀತಿ ಆದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಣ ರಂಗದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆಯೇ, ದಯವಿಟ್ಟು ಈ ಆಜ್ಞೆಯನ್ನು ವಾಪಸ್ಸು ಪಡೆಯಬೇಕೆಂದು ಹೇಳುತ್ತೇನೆ. ಈ ವರ್ಷವಾದರೂ. ಚಿಕ್ಕಪಡಸಲಗಿ ಗ್ರಾಮದಲ್ಲಿ ನಡೆಯುವ ಉಚಿತ ಪ್ರಸಾದ ನಿಲಯಕ್ಕೆ ಗ್ರಾಂಟ್ ನೀಡಬೇಕೆಂದು ತಮ್ಮ ಮೂಲಕ ಸಮಾಜ ಕಲ್ಯಾಣ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರು ಖಾಸಗೀ ವಿದ್ಯಾರ್ಥಿನಿಲಯಗಳಿಗೆ ಸಂಬಂಧಪಟ್ಟಂತೆ ಕೇಳುತ್ತಿದ್ದಾರೆ, ರಾಜ್ಯದಲ್ಲಿ ಸುಮಾರು ೨೪೧ ಖಾಸಗೀ ವಿದ್ಯಾರ್ಥಿನಿಲಯಗಳಿವೆ ಕ್ರಮಬದ್ಧವಾಗಿ ಕೆಲಸ ಮಾಡದೇ ಇರುವ ವಿದ್ಯಾರ್ಥಿನಿಲಯಗಳಿಗೆ ಅನುದಾನ ನಿಲ್ಲಿಸಿದ ಪ್ರಕರಣಗಳು ಇವೆ. ೧-೪-೧೯೬೮ರಿಂದ ಜಿಲ್ಲಾಪರಿಷತ್ ವ್ಯಾಪ್ತಿಗೆ ಎಲ್ಲಾ ಅಧಿಕಾರವು ಹೋಗಿದೆ. ಗ್ರಾಂಟ್-ಇನ್-ಏಯಿಡ್ ಹಾಸ್ಟಲುಗಳನ್ನು, ಮಂಜೂರು ಮಾಡುವ, ಗ್ರಾಂಟ್ ಕೊಡುವ ಅಧಿಕಾರ ಸರ್ಕಾರಕ್ಕೆ ಇಲ್ಲ. ಜಿಲ್ಲಾ ಪರಿಷತ್‌ನಿಂದ ಪ್ರೊಪೋಸಲ್ ಬಂದರೆ ಈಗಲೂ ಅದನ್ನು ಮಂಜೂರು ಮಾಡಿಸಿಕೊಡಲಾಗುವುದು.